ಓ.ಎಸ್. ನಂ. 72/2014

ಪಿ.ಡಬ್ಲ್ಯುಃ 01 (Basavaraja)

ದಿನಾಂಕಃ 18.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ KGK ವಕೀಲರಿಂದ.

ಓ ಎಸ್ 99/2013 ರಂತೆ ನನ್ನ ಅಣ್ಣನ ಮಕ್ಕಳು ನನ್ನ ವಿರುದ್ಧ ದಾವೆ ದಾಖಲು ಮಾಡಿದ್ದಾರೆ ಎಂದು ಕಳೆದ ಬಾರಿ ಹೇಳಿದ್ದೆ, ನಾನು ಅದರಲ್ಲಿ ವಕೀಲರ ಮೂಲಕ ಹಾಜರಾಗಿದ್ದೆ ಎಂದು ಹೇಳಿದ್ದೆ ಎಂದರೆ ನನಗೆ ನೆನಪಿಲ್ಲ. ಈಗ ನಾನು ನೋಡುತ್ತಿರುವ ಸದರಿ ದಾವೆಯ ವಾದ ಪತ್ರ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾವುಗಳೆಲ್ಲ ರಾಜಿ ಅರ್ಜಿ ಸಲ್ಲಿಸಿದ್ದೆವು ಎಂದರೆ ನನಗೆ ನೆನಪಿಲ್ಲ. ಈಗ ನೋಡುತ್ತಿರುವುದು ನಾವು ಸಲ್ಲಿಸಿದ ರಾಜಿ ಅರ್ಜಿ ಹಾಗೂ ಡಿಕ್ರಿ ಎಂದರೆ ನನಗೆ ಗೊತ್ತಿಲ್ಲ.

ಈ ಪ್ರಕರಣದಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯವರು 2019 ರಲ್ಲಿ ತಮ್ಮ ಪರವಾಗಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ತಿಳಿದ ನಂತರ ಸಾಕ್ಷಿ ನುಡಿಯಲು ನನಗೆ ತೊಂದರೆ ಇದೆಯೇ ಎಂದರೆ ಅವರ ದಾಖಲಾತಿಯ ಬಗ್ಗೆ ನನಗೆ ಗೊತ್ತಿಲ್ಲ.

ನಾನು ಸದಾ ಎಸ್ ಕೆ ಬಸವರಾಜ ಎಂದು ಆಂಗ್ಲಭಾಷೆಯಲ್ಲಿ ರುಜು ಮಾಡುತ್ತೇನೆ ಎಂದರೆ ಹೌದು. ನನ್ನ ರುಜುವನ್ನು ನೋಡಿದರೆ ನಾನು ಗುರುತಿಸಬಲ್ಲೇ. ಈಗ ನೋಡುತ್ತಿರುವ ವಾದಪತ್ರದಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಎಸ್ ಕೆ ಬಸವರಾಜ ಎಂದು ಇರುವ ರುಜು ನನ್ನದೇ ಎಂದರೆ ನನಗೆ ಗೊತ್ತಿಲ್ಲ ಹಾಗೂ ನನಗೆ ನೆನಪಿಲ್ಲ. ನನಗೆ ಮರುವಿನ ಕಾಯಿಲೆ ಇಲ್ಲ. ನಾನು ದಾವೆಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಏನು ಬರೆಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಾನು ನೋಡುತ್ತಿರುವ ದಿನಾಂಕ 19.04.1989 ರ ಪಾಲು ವಿಭಾಗ ಪತ್ರದಲ್ಲಿರುವ ಎಸ್ ಕೆ ಬಸವರಾಜ ಎಂಬುದು ನನ್ನ ಸಹಿ ಎಂದರೆ ನನಗೆ ನೆನಪಿಲ್ಲ. ನಾನು ಪ್ರತಿನಿತ್ಯ ಸಹಿ ಮಾಡುವ ಕ್ರಮ ಇಟ್ಟುಕೊಂಡಿದ್ದೇನೆ ಎಂದರೆ ಆ ರೀತಿ ವ್ಯವಹಾರ ನಾನು ಮಾಡುವುದಿಲ್ಲ. ಕೊನೆಯ ಬಾರಿ ಎಷ್ಟು ವರ್ಷಗಳ ಹಿಂದೆ ನಾನು ಸಹಿ ಮಾಡಿದ್ದೇನೆ ಎಂದರೆ ನನಗೆ ನೆನಪಿಲ್ಲ. ಈ ದಿನ ನಾನು ನನ್ನ ಸಹಿಯನ್ನು ಗುರುತಿಸದ ಸ್ಥಿತಿಯಲ್ಲಿದ್ದೇನೆ ಎಂದರೆ ನನ್ನ ಸಹಿಯನ್ನು ಮಾತ್ರ ಗುರುತಿಸಬಲ್ಲೇ, ನನ್ನದಲ್ಲದ ಸಹಿಯನ್ನು ಗುರುತಿಸಲಾರೇ. ಮೇಲೆ ಹೇಳಿದ ತೋರಿಸಿದ ದಾಖಲಾತಿಗಳಲ್ಲಿರುವ ಸಹಿಗಳು ನನ್ನದಲ್ಲವೇ ಎಂದರೆ ನನಗೆ ಗೊತ್ತಿಲ್ಲ.

ಕಳೆದ ಬಾರಿ ಸಾಕ್ಷಿ ನುಡಿದ ನಂತರ ನಾನು ಸಹಿ ಮಾಡಿ ಹೋಗಿರುತ್ತೇನೋ ಇಲ್ಲವೊ ನನಗೆ ಗೊತ್ತಿಲ್ಲ. ನನ್ನ ಸಹಿಯನ್ನು ಗುರುತಿಸಿದರೆ ದಾಖಲಾತಿಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂದು ನಾನು ಸಹಿಗಳನ್ನು ಗುರುತಿಸುತ್ತಿಲ್ಲ ಎಂದರೆ ಸರಿಯಲ್ಲ.

ಈಗ ನೋಡುತ್ತಿರುವುದು 1969 ರಿಂದ 2002 ರ 8 ಪಹಣಿ ಪತ್ರಿಕೆಗಳು ಎಂದರೆ ಹೌದು. ಸಾಕ್ಷಿ ಸದರಿ ದಾಖಲಾತಿಗಳನ್ನು ಒಪ್ಪಿಕೊಂಡ ಕಾರಣ ಅವುಗಳನ್ನು ನಿಡಿ 1 ರಿಂದ 8 ಎಂದು ಗುರುತಿಸಲಾಯಿತು. ಅವುಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ಕೈಬರಹದ ಪಹಣಿಗಳು ಎಂದರೆ ಸರಿ. ದಾವೆ ಹೂಡಿದಾಗ ಹಾಗೂ ಅದರ ನಂತರ ನನಗೆ ನಿಡಿ 1 ರಿಂದ 8 ರ ಬಗ್ಗೆ ಮಾಹಿತಿ ಇತ್ತು ಎಂದರೆ ಇತ್ತು. ಅದರಲ್ಲಿ ಬದಲಾವಣೆಯಾದ ಹೆಸರುಗಳ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಇಲ್ಲ. ನಿಡಿ 3 ರ ಪಹಣಿ ಪತ್ರಿಕೆಯಲ್ಲಿ ಅಂದರೆ 1988-89 ರ ಪಹಣಿ ಪತ್ರಿಕೆಯಲ್ಲಿ ಸಿದ್ದಯ್ಯನಕೋಟೆ ಬಸವರಾಜ ತಂದೆ ತಿಮ್ಮಯ್ಯರವರ ಹೆಸರು ತೆಗೆದು ಎಸ್ ಕೆ ರುದ್ರಮುನಿ ತಂದೆ ತಿಪ್ಪಣ್ಣರವರ ಹೆಸರು ಸೇರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರುತ್ತದೆ. ನಿಡಿ 3 ನ್ನು ಈಗ ನೋಡುತ್ತಿದ್ದು ಅದರಲ್ಲಿ ಆ ರೀತಿ ಬದಲಾವಣೆಯಾಗಿದೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಋಣಭಾರ ಪ್ರಮಾಣ ಪತ್ರದಲ್ಲಿ ನನ್ನ ಹೆಸರೇ ಇದೆ, ನಿಡಿ 3 ರಲ್ಲಿ ತಪ್ಪಾಗಿ ಆ ರೀತಿ ಬದಲಾವಣೆಯಾಗಿದೆ. ತಪ್ಪಾಗಿ ಬದಲಾವಣೆಯಾದ ನಂತರ ನಾನು ಅದನ್ನು ಸರಿಪಡಿಸಲು ಅರ್ಜಿ ನೀಡಿರುತ್ತೇನೆಯೇ ಎಂದರೆ ಇಲ್ಲ. ನಾನು ಅದನ್ನು ನೋಡಿರಲಿಲ್ಲ. ನಿಡಿ 3 ರ ಕಾಲಂ 10 ರಲ್ಲಿ ಪಾಲು ವಿಭಾಗದ ಪ್ರಕಾರ ಎಂದು ನಮೂದಾಗಿದೆ ಎಂದರೆ ಹೌದು. ನಮಗೆ ತಿಳಿಸದೇ ಆ ರೀತಿ ಬದಲಾವಣೆ ಮಾಡಿರುತ್ತಾರೆ.

ಪಹಣಿ ಪತ್ರಿಕೆಯ ಕಾಲಂ 10 ರಲ್ಲಿರುವ ಆದೇಶಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ನನ್ನ ಹೆಸರು ಇದೆಯೇ ಎಂದರೆ ಅದಕ್ಕೂ ನನಗೂ ಸಂಬಂಧ ಇಲ್ಲ, ನನಗೆ ಅದರ ಬಗ್ಗೆ ಗೊತ್ತಿಲ್ಲ. ಈ ರೀತಿ ಖಾತೆ ವರ್ಗಾವಣೆಯಾಗುವ ಮೊದಲು ತಹಶೀಲ್ದಾರ್ ನ್ಯಾಯಾಲಯದಲ್ಲಿ ಅದರ ಬಗ್ಗೆ ಪ್ರಕರಣ ದಾಖಲು ಮಾಡಿಕೊಂಡು ಸವಿವರವಾದ ಆದೇಶ ಮಾಡಿರುತ್ತಾರೆ, ಅದರ ದಾಖಲಾತಿಯನ್ನು ನೋಡುತ್ತಿದ್ದೇನೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಆ ರೀತಿ ಖಾತೆ ವರ್ಗಾವಣೆಯಾದ ಸಮಯದಲ್ಲಿ ನಾವೆಲ್ಲ ಸೇರಿ ವಂಶವೃಕ್ಷ ತಯಾರು ಮಾಡಿ ತಹಶೀಲ್ದಾರ್ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ 1989 ನೇ ಸಾಲಿನಲ್ಲಿ ನಾವು ಯಾವುದೇ ದಾಖಲಾತಿಯನ್ನು ಮಾಡಿಕೊಂಡಿರುವುದಿಲ್ಲ. ಸದರಿ ವಂಶವೃಕ್ಷಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನು ಸಹಿ ಮಾಡಿ ಹೇಳಿಕೆಯನ್ನು ತಹಶೀಲ್ದಾರ್ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ.

ದಿಃ 19.04.1989 ರಂದು ನನ್ನ ತಂದೆ ಹಾಗೂ ಅವರ ಮಕ್ಕಳ ನಡುವೆ ಒಟ್ಟುಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದಲ್ಲಿ ದಾವಾ ಸ್ವತ್ತು 2 ನೇ ಪ್ರತಿವಾದಿಯ ಭಾಗಕ್ಕೆ ಹೋಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಧೀನದಲ್ಲಿಯೇ ಇತ್ತು.

ಪಾಲು ವಿಭಾಗ ಆದ ನಂತರ 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆಯಾಗಿ ಅವರ ಸ್ವಾಧೀನಾನುಭವದಲ್ಲಿ ಇತ್ತು ಎಂದರೆ ಸರಿಯಲ್ಲ. ದಿಃ 04.06.2001 ರಂದು 2 ನೇ ಪ್ರತಿವಾದಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದಾದ ನಂತರ ಕಂದಾಯ ದಾಖಲಾತಿಗಳು 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿವೆ ಎಂದರೆ ನಾನು ನೋಡಿರುವುದಿಲ್ಲ.

ಓ ಎಸ್ 99/2013 ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯಲ್ಲಿ 1989 ರಲ್ಲಿ ಆಗಿರುವ ಪಾಲು ವಿಭಾಗದ ಬಗ್ಗೆ ನಮೂದು ಮಾಡಿರುತ್ತದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅದರಲ್ಲಿ ದಾವಾ ಸ್ವತ್ತಿನ ಬಗ್ಗೆ ಉಲ್ಲೇಖ ಇಲ್ಲ. ಸದರಿ ರಾಜಿ ಅರ್ಜಿಯಲ್ಲಿ 1989 ರ ಪಾಲು ವಿಭಾಗದ ಬಗ್ಗೆ ಒಪ್ಪಿದ್ದರು ಸಹ ಈ ದಾವೆಯಲ್ಲಿ ಅನಾನುಕೂಲ ಆಗುತ್ತದೆ ಎಂದು ಅದು ಸುಳ್ಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಶೀದಿ ಪಟ್ಟಾದಂತಹ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಅದನ್ನು ನೋಡಿದರೆ ಗುರುತಿಸಬಲ್ಲೇ. ಈಗ ನೋಡುತ್ತಿರುವುದು ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಟ್ಟಾ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಎಂದಿಗೂ ನನ್ನ ಮಾಲೀಕತ್ವಕ್ಕೆ ಸೇರಿದ ಆಸ್ತಿ ಅಲ್ಲ ಎಂದರೆ ನಾವೇ ಸಾಗುವಳಿ ಮಾಡುತ್ತಿದ್ದೇವೆ.

1981 ರಲ್ಲಿ ಆಗಿದೆ ಎಂದು ಹೇಳಲಾದ ಪಾಲು ವಿಭಾಗ ಪತ್ರ ಆದಾಯ ತೆರಿಗೆಗೆ ಸಂಬಂಧಪಟ್ಟಂತೆ ಮಾಡಿದ ವ್ಯವಸ್ಥೆ ಆಗಿತ್ತು ಎಂದರೆ ಸರಿಯಲ್ಲ. 1981 ರ ಪಾಲು ವಿಭಾಗದನ್ವಯ ಯಾವುದೇ ಕಂದಾಯ ವರ್ಗಾವಣೆಗಳು ಆಗಿರುವುದಿಲ್ಲ ಎಂದರೆ ಆಗಿವೆ. ಆ ರೀತಿ ವರ್ಗಾವಣೆಯಾಗದೇ ಇದ್ದರು ಸಹ ಪ್ರಕರಣಕ್ಕೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ 1989 ರಲ್ಲಿ ಪ್ರಥಮ ಬಾರಿಗೆ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. 1989 ರ ಪಾಲು ವಿಭಾಗ ಪತ್ರದ ಪ್ರಕಾರ ತಹಶೀಲ್ದಾರವರ ಮುಂದೆ ಹಾಜರಾಗಿ ನೀಡಿದ ವರದಿಯ ಆಧಾರದ ಮೇರೆಗೆ ಖಾತಾ ವರ್ಗಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. 1989 ರ ಪಾಲು ವಿಭಾಗ ಪತ್ರದ ಪ್ರಕಾರ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಿಗೆ ಹೋದ ಕಾರಣ ಅವರ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ನಾನು ನೋಡಿರುವುದಿಲ್ಲ. 1989 ರಿಂದ ದಾವಾ ಸ್ವತ್ತನ್ನು ಮಾರಾಟ ಮಾಡುವವರೆಗೆ 2 ನೇ ಪ್ರತಿವಾದಿ ಅನುಭವಿಸುತ್ತಾ ಬಂದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ 1 ನೇ ಪ್ರತಿವಾದಿಯವರೇ ಅದನ್ನು ಅನುಭವಿಸುತ್ತಾ ಬಂದಿದ್ದಾರೆ ಎಂದರೆ ನಾನೇ ಸಾಗುವಳಿ ಮಾಡುತ್ತಿದ್ದೇನೆ. ದಾವಾ ಸ್ವತ್ತನ್ನು ನಾನೇ ಸಾಗುವಳಿ ಮಾಡುತ್ತಿದ್ದೇನೆ ಎಂದು ತೋರಿಸಲು ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿ ದಾಖಲಾತಿ ಸಾಕ್ಷ್ಯಗಳು ಇರುವುದಿಲ್ಲ ಎಂದರೆ ಸಾಗುವಳಿ ಮಾಡಲು ಯಾವುದೇ ದಾಖಲಾತಿಗಳು ಬರುವುದಿಲ್ಲ. 1989 ರಿಂದ 2014 ರವರೆಗೆ ಅಂದರೆ ಈ ದಾವೆಯನ್ನು

ದಾಖಲು ಮಾಡುವವರೆಗೆ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳು ನನ್ನ ಹೆಸರು ಇಲ್ಲ ಎಂದರೆ ನನಗೆ ಗೊತ್ತಿಲ್ಲದ ಹಾಗೆ ಅವರು ಹಾಗೆ ಮಾಡಿಕೊಂಡಿರುತ್ತಾರೆ. ನಾನು ಆ ರೀತಿ ಮಾಡಿರುವ ಖಾತಾ ವರ್ಗಾವಣೆಯನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಾಗಿರಲಿಲ್ಲ. ನಾನು ಸ್ವಾಧೀನದಲ್ಲಿದ್ದಿದ್ದರೇ ಪಹಣಿಯಲ್ಲಾದ ವ್ಯತ್ಯಾಸವನ್ನು ಪ್ರಶ್ನಿಸಿರುತ್ತೇನೆಯೇ ಎಂದರೆ ಗ್ರಾಮ ಲೆಕ್ಕಿಗ ಹಾಗೂ ಕಂದಾಯ ನಿರೀಕ್ಷ ಅಧಿಕಾರಿಯನ್ನು ಸಂಪರ್ಕಿಸಿದಾಗ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಗೊಳಿಕೊಳ್ಳಲು ತಿಳಿಸಿರುತ್ತಾರೆ.

ಆ ಬಗ್ಗೆ ನಾನು ಅವರುಗಳಿಗೆ ಅರ್ಜಿ ಸಲ್ಲಿಸಿರಲಿಲ್ಲ. ಆ ರೀತಿ ಅರ್ಜಿ ಸಲ್ಲಿಸಲು ತೊಂದರೆ ಇರಲಿಲ್ಲ, ಆದರೆ ಮೌಖಿಕವಾಗಿ ಕೇಳಿದಾಗ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಗೊಳಿಕೊಳ್ಳಲು ತಿಳಿಸಿರುತ್ತಾರೆ. ಈ ಬಗ್ಗೆ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ನಾನು ಎಂದಿಗೂ ದಾವಾ ಆಸ್ತಿಯ ಮಾಲೀಕನಲ್ಲದೆ ಇದ್ದರು ಸಹ ಸುಳ್ಳು ಆರೋಪಗಳನ್ನು ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1989 ರಿಂದ ಇಂದಿನವರೆಗೂ ನಾವು ಎಂದಿಗೂ ದಾವಾ ಆಸ್ತಿಯ ಸ್ವಾಧೀನದಲ್ಲಿರಲಿಲ್ಲ ಎಂದರೆ ನಾವೇ ಇದ್ದೇನೆ. ನನಗೆ 1989 ರ ಪಾಲು ವಿಭಾಗದ ಬಗ್ಗೆ ಹಾಗೂ ಓ ಎಸ್ 99/13 ರ ಬಗ್ಗೆ ಮಾಹಿತಿ ಇದ್ದರು ಸಹ ಅವನ್ನೆಲ್ಲ ಮರೆಮಾಚಿ ಸುಳ್ಳು ಆರೋಪ ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಓ ಎಸ್ 99/13 ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿದ್ದು ಅದರ ಬಗ್ಗೆ ಈ ದಾವೆಯಲ್ಲಿ ನಮೂದು ಮಾಡಿದರೆ ತೊಂದರೆ ಆಗುತ್ತದೆ ಎಂದರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಆ ದಾವೆ ಹಾಗೂ ಈ ದಾವೆ ಬೇರೆ ವ್ಯವಹಾರಗಳಿಗೆ ಸಂಬಂಧಪಡುತ್ತದೆ. ಸುಳ್ಳು ಆರೋಪಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.